**ಓ.ಎಸ್. ನಂ. 250/2018 ಪಿ.ಡಬ್ಲೂ-1 ಹೆಸರು – ಚಿಕ್ಕಮಾದಶೆಟ್ಟಿ**

**ಸಾಕ್ಷಿಯನ್ನು ದಿನಾಂಕಃ 09.12.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಂ.ಆರ್ ವಕೀಲರಿಂದಃ-**

ನನ್ನ ತಂದೆಯ ಹೆಸರು ಮಾದಶೆಟ್ಟಿ. ನನ ತಂದೆಗೆ ಇಬ್ಬರು ಮಕ್ಕಳು. ನಾನು ಮತ್ತು ನನ್ನ ಅಣ್ಣನಾದ ಮಾದಶೆಟ್ಟಿ. ನನಗೆ ಓರ್ವ ಅಕ್ಕ ಇದ್ದು, ಅವರ ಹೆಸರು ವೆಂಕಟಮ್ಮ. ಪ್ರತಿವಾದಿಯರು ನಮಗೆ ಸಂಬಂಧಿಕರಲ್ಲ. ದಾವಾ ಸ್ವತ್ತುಗಳನ್ನು ನಮ್ಮ ತಂದೆ ಖರೀದಿಸಿರುತ್ತಾರೆ. ನನ್ನ ತಂದೆ ಖರೀದಿ ಮಾಡಿರುವ ಕುರಿತಾಗಿ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ ಇತರೆ ಮನೆ ಕೂಡ ಇದೆ. ನಮ್ಮ ಮನೆಯ ಪಕ್ಕದ ಚಾವಡಿ ಬೀದಿಯಲ್ಲಿ ಮತ್ತೊಂದು ಮನೆ ಇದೆ. ಚಾವಡಿ ಬೀದಿಯಲ್ಲಿರುವ ಮನೆಯ ಅಸೆಸ್‌ಮೆಂಟ್ ಸಂಖ್ಯೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ 1954 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಮನೆಯ ವಿಸ್ತೀರ್ಣ ಗೊತ್ತಿಲ್ಲ. ನನ್ನ ತಂದೆ ದಾವಾ ಸ್ವತ್ತನ್ನು ರಂಗಯ್ಯನ ಮಾದಮ್ಮರವರಿಂದ ಖರೀದಿಸಿರುತ್ತಾರೆ. ನಾನು ವಾದ ಪತ್ರದಲ್ಲಿ ನನ್ನ ತಂದೆ ಖಾಲಿ ನಿವೇಶವನ್ನು ಖರೀದಿಸಿದ್ದಾರೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನನ್ನ ಅಣ್ಣ ಈಗ ಮೃತಪಟ್ಟಿರುತ್ತಾರೆ. ಕ್ರಯ ಪತ್ರದಲ್ಲಿ ನಮೂದಿಸಿರುವ ಮಾದಶೆಟ್ಟಿ ಎಂಬುವವರು ನನ್ನ ಅಣ್ಣ ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ಅಣ್ಣ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ನಾವಿಬ್ಬರು ಸೇರಿ ಖರೀದಿಸಿದ್ದೇವೆ ಎಂದು ಹೇಳುತ್ತಾರೆ. ಕ್ರಯ ಪತ್ರದಲ್ಲಿ ಖಾಲಿ ನಿವೇಶನ ಎಂದು ನಮೂದು ಇಲ್ಲ ಬದಲಾಗಿ ಮನೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು ಅಸೆಸ್‌ಮೆಂಟ್ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಅಸೆಸ್‌ಮೆಂಟಿನಲ್ಲಿ ನಮೂದಿಸಿರುವ ವಿಸ್ತೀರ್ಣದ ಕುರಿತು ನನಗೆ ಗೊತ್ತಿಲ್ಲ. ಕ್ರಯ ಪತ್ರದಲ್ಲಿ ಪೂರ್ವ ಪಶ್ಚಿಮ ಹದಿನಾಲ್ಕುವರೆ ಗಜ ಮತ್ತು ಉತ್ತರ ದಕ್ಷಿಣ ಹದಿನಾಲ್ಕುವರೆ ಗಜ ಇದೆ ಎಂದರೆ ಸರಿ. ಅಸೆಸ್‌ಮೆಂಟಿನಲ್ಲಿ ಪೂರ್ವ ಪಶ್ಚಿಮ 20 ಅಡಿ ಮತ್ತು ಉತ್ತರ ದಕ್ಷಿಣ 40 ಅಡಿ ಇದೆ ಎಂದು ನಮೂದು ಇದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಜವರಶೆಟ್ಟಿರವರ ಮನೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಮಾದಶೆಟ್ಟಿರವರ ಮನೆ, ದಕ್ಷಿಣಕ್ಕೆ ಬೀದಿ ಇದೆ. ಕ್ರಯ ಪತ್ರದಲ್ಲಿ ಪೂರ್ವಕ್ಕೆ ಜವನಶೆಟ್ಟಿರವರ ಖಾಲಿ ನಿವೇಶನ,

ಪಶ್ಚಿಮಕ್ಕೆ ಬೀದಿ, ದಕ್ಷಿಣಕ್ಕೆ ಪಂಚಾಯಿತಿ ಚಾವಡಿ ಮತ್ತು ಉತ್ತರಕ್ಕೆ ಮಾದಶೆಟ್ಟರವರ ನಿವೇಶನ ಎಂದು ನಮೂದು ಇದೆ ಎಂದರೆ ಸರಿ. ನಿಪಿ.1 ರ ಕ್ರಯ ಪತ್ರ ಹಾಗೂ ನಿಪಿ.2 ರ ಅಸೆಸ್‌ಮೆಂಟಿನಲ್ಲಿನ ಚೆಕ್ಕು ಬಂಧಿಯ ಕುರಿತು ಒಂದಕ್ಕೊಂದು ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಪೂರ್ವಕ್ಕೆ ಗಲ್ಲಿ ಮತ್ತು ಆನಂತರ ಪ್ರತಿವಾದಿಯರ ಬಿ ಅನುಸೂಚಿತ ಸ್ವತ್ತು, ಪಶ್ಚಿಮಕ್ಕೆ ಮಾದಶೆಟ್ಟರವರ ಮನೆ, ಉತ್ತರಕ್ಕೆ ಗಲ್ಲಿ ಮತ್ತು ದಕ್ಷಿಣಕ್ಕೆ ಬೀದಿ ಎಂದು ನಮೂದು ಇದೆ ಎಂದರೆ ಸರಿ. ಪ್ರತಿವಾದಿ ನಮ್ಮ ಮನೆಯ ಪಕ್ಕ ಮನೆಯನ್ನು ನಿರ್ಮಿತ ಮಾಡಿದ್ದು, ಪ್ರತಿವಾದಿಯರಿಗೆ ಸೇರಿದ್ದ ಸ್ವತ್ತಿನ ಸಂಖ್ಯೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನಾನು ವಾಸಿಸುತ್ತಿಲ್ಲ ಬದಲಾಗಿ ಹಳೆಯ ಮನೆಯಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿ ಜಾಗವನ್ನು ಬಿಡದೆ ನನಗೆ ತೊಂದರೆಯನ್ನು ನೀಡಿ ಮನೆಯನ್ನು ಕಟ್ಟುತ್ತಿದ್ದಾರೆ. ಪ್ರತಿವಾದಿಗೆ ಸೇರಿದ ಸ್ವತ್ತಿನ ಜಂಜುರು ಸಂಖ್ಯೆ 2051 ಮತ್ತು ಆಸ್ತಿ ಸಂಖ್ಯೆ 146 ಎಂದರೆ ಗೊತ್ತಿಲ್ಲ. ಸದರಿ ಸ್ವತ್ತು 43*43 ಅಡಿ ಇದೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ಆತನಿಗೆ ಸೇರಿದ 43 * 43 ಅಡಿಗಳ ಪೈಕಿ 43 * 20 ಅಡಿಗಳ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದು, ಉಳಿಕೆ 43*20 ಅಡಿಗಳ ಖಾಲಿ ನಿವೇಶನ ಇದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರೇ ವಾಸವಿದ್ದು, ಅವರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>(ಪ್ರತಿವಾದಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು )</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**